**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ . ದಂಡಾಧಿಕಾರಿಗಳ ನ್ಯಾಯಾಲಯ,   ಆನೇಕಲ್.**

| | |
|---|---|
| **ಒ ಎಸ್. ನಂ :-** | 474/2016 |
| **ಪಿ.ಡಬ್ಲ್ಯೂ** | **1** |
| **ದಿನಾಂಕ  :-** | **21.08.2024** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:  ಪ್ರತಿವಾದಿಯರ ಪರ ವಕೀಲರಿಂದ**

ವಾದ ಪತ್ರದ ಕಂಡಿಕೆ 2 ರಲ್ಲಿ ಹೇಳಿರುವ ಆಸ್ತಿಗಳು ನಾವು 2011 ರಲ್ಲಿ ಖರೀದಿ ಮಾಡಿರುತ್ತೇವೆ. ಆ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಗಳೊಂದಿಗೆ ನಮ್ಮ ತಂದೆ ಮಾತುಕತೆ ಮಾಡಿದ್ದರು. ಅದು ಬರವಣಿಗೆಯಲ್ಲಿ ಇರಲಿಲ್ಲ. ನಾವು ಖರೀದಿ ಮಾಡಿರುವ ಸರ್ವೆ ನಂ 101/2 ಹಾಗೂ 102/2 ರಲ್ಲಿ ವ್ಯವಸಾಯ ಮಾಡುತ್ತಿದ್ದೇವೆ. ನಮಗೆ ಮಾರಾಟ ಮಾಡುವ ಮೊದಲು ಅದರ ಮಾಲೀಕರು ಅದರಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಸದರಿ ವ್ಯವಸಾಯ ಕಾರ್ಯಗಳನ್ನು ಮಾಡಲು ದಾವಾ ಆಸ್ತಿಯನ್ನು ನಮ್ಮ ಮಾರಾಟಗಾರರಾಗಲಿ ಅಥವಾ ನಾವಾಗಲಿ ರಸ್ತೆಯಾಗಿ ಅದನ್ನು ಉಪಯೋಗಿಸಿಲ್ಲ ಎಂದರೆ ಸರಿ. ನಮ್ಮ ಜಮೀನಿಗೆ ಅದರ ದಕ್ಷಿಣ ಭಾಗದಲ್ಲಿರುವ ರಸ್ತೆಯ ಮುಖಾಂತರ ಹೋಗಿ ಬಂದು ಮಾಡುತ್ತಿದ್ದೆವು. ಜಗದೀಶ ರವರು ನಿಪಿ 1 ಕ್ರಯದ ಕರಾರಿಗೆ ಸಹಿ ಮಾಡಿಲ್ಲ. ದಾವಾ ಆಸ್ತಿಯ ವಿಚಾರವಾಗಿ ನಮ್ಮ ಮತ್ತು ಜಗದೀಶ ರವರ ನಡುವೆ ಏನು ಮಾತುಕತೆ ಆಗಿತ್ತು ಎಂದರೆ ನಮ್ಮ ತಂದೆ ಮಾತನಾಡಿದ್ದರು ಎಂದು ನುಡಿದಿರುತ್ತಾರೆ. ಜಗದೀಶ ರವರು ದಾವಾ ಆಸ್ತಿಯನ್ನು ದಾರಿಗಾಗಿ ಬಿಡಿಸಿಕೊಡದಿದ್ದರೆ ಏನು ಮಾಡಬೇಕು ಎಂಬುದು ನಮ್ಮ ತಂದೆ ಮಾತನಾಡಿದ್ದರು, ನನಗೆ ಗೊತ್ತಿಲ್ಲ. ನಮ್ಮ ತಂದೆ ಮರಣ ನಂತರ ನಾನು ಜಗದೀಶರವರೊಂದಿಗೆ ಯಾವುದೇ ಮಾತುಕತೆ ಮಾಡಿಲ್ಲ. ನಮ್ಮ ಕ್ರಯ ಪತ್ರದಲ್ಲಿ ಜಗದೀಶ ರವರು ದಾವಾ ಆಸ್ತಿಯನ್ನು ದಾರಿಗಾಗಿ ಬಿಡಿಸಿಕೊಡುತ್ತೇನೆ ಎಂದು ಅದರಲ್ಲಿ ನಮೂದಾಗಿದೆ. ರಸ್ತೆಯನ್ನು ಬಿಡಿಸಿಕೊಟ್ಟಿಲ್ಲ ಎಂದು ಜಗದೀಶ ರವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಮ್ಮ ಆಸ್ತಿಗಳಿಗೆ ಹೊಂದಿಕೊಂಡಂತೆ ದಾವಾ ಆಸ್ತಿ ಇದೆ ಎಂದು ನಾವು ಯಾವುದೇ ದಾಖಲೆ ಕೊಟ್ಟಿಲ್ಲ. ದಾವಾ ಆಸ್ತಿಗೆ ಕೊಟ್ಟಿರುವ ಚೆಕ್ ಬಂದಿ ಸದರಿ 3 ಗುಂಟೆಗೆ ಸಂಬಂಧಿಸಿದ್ದು. ಪ್ರತಿವಾದಿಗಳಿಗೆ ಈ ದಾವಾ ಸರ್ವೆ ನಂ ನಲ್ಲಿ 17 ½ ಗುಂಟೆ ಇದೆ ಎಂದರೆ ಸರಿ. ಪಶ್ಚಿಮಕ್ಕೆ ಪ್ರತಿವಾದಿಯರ ಉಳಿಕೆ ಜಮೀನು ಇದೆ, ಅದು ಸರ್ವೆ ನಂ 54/2. ನಿಪಿ 1 ಕರಾರು ಹಾಗೂ ಚೆಕ್ ಬಂದಿಯಲ್ಲಿ ಪೂರ್ತಿ ಜಮೀನಿಗೆ ತಪ್ಪಾಗಿ ತೋರಿಸಿದ್ದೇವೆ ಎಂದರೆ ಸಾಕ್ಷಿ ಚೆಕ್ ಬಂದಿ 17 ½ ಗುಂಟೆಗೆ ತೋರಿಸಿದ್ದೇವೆ ಎಂದು ನುಡಿದಿರುತ್ತಾರೆ.

ಪ್ರತಿವಾದಿಗಳಿಗೆ ದಾವಾ ಆಸ್ತಿ ಮಾರಾಟ ಮಾಡುವ ದರ್ದು ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ವ್ಯಯಕ್ತಿಕ ಕಾರಣಗಳಿಗೆ ಹಾಗೂ ನಮಗೆ ದಾರಿಗಾಗಿ ಮಾರಾಟ ಮಾಡಲು ಒಪ್ಪಿರುತ್ತಾರೆ. ನಿಪಿ 1 ರಲ್ಲಿ ದಾರಿಗಾಗಿ ಮಾರಾಟ ಮಾಡುತ್ತಿದ್ದಾರೆ ಎಂದು ನಮೂದಾಗಿದೆ. ಆ ರೀತಿ ನಿಪಿ 1 ರಲ್ಲಿ ನಮೂದಾಗಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಕಾಣಿಸಿರುವ ಹಣ ಪ್ರತಿವಾದಿಯರಿಗೆ ಕೊಟ್ಟ ಬಗ್ಗೆ ದಾಖಲಾತಿ ಇಲ್ಲ. ನಿಪಿ 1 ರ ಪ್ರಕಾರ ಎಷ್ಟು ದಿನಗಳ ಒಳಗಾಗಿ ಕ್ರಯ ಪತ್ರ ಮಾಡಿಕೊಳ್ಳಬೇಕಿತ್ತು ಎಂಬುದು ನಮ್ಮ ತಂದೆಗೆ ತಿಳಿದಿರುತ್ತದೆ. ನನಗೆ ಆ ಬಗ್ಗೆ ಮಾಹಿತಿ ಇಲ್ಲ. ನಿಪಿ 1 ರಲ್ಲಿ ದಾರಿಗಾಗಿ ಖರೀದಿ ಮಾಡುತ್ತಿದ್ದೇವೆ ಎಂದು ಬರೆಸಲು ತೊಂದರೆ ಇರಲಿಲ್ಲ. ಒಂದು ವೇಳೆ ನಿಮಗೆ ದಾರಿಗಾಗಿ ದಾವಾ ಆಸ್ತಿ ಬೇಕಾಗಿದ್ದಲ್ಲಿ ನಿಪಿ 1 ರಲ್ಲಿ ನಿಮಗಾಗಲಿ ಅಥವಾ ನೀವು ತಿಳಿಸಿದ ವ್ಯಕ್ತಿಗಾಗಲಿ ಕ್ರಯ ಪತ್ರ ಮಾಡಿಕೊಡುತ್ತೇವೆ ಎಂದು ಯಾಕೆ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಿಪಿ 1 ಆಗುವ ಸಮಯದಲ್ಲಿ ಯಾವುದೇ ತಂಟೆ ತಕರಾರು ಇರಲಿಲ್ಲ. 2 ಮತ್ತು 3ನೇ ಪ್ರತಿವಾದಿಗಳ ಹಾಗೂ ಅವರ ತಂದೆಯ ಅಣ್ಣತಮ್ಮಂದಿರ ನಡುವೆ ತಕರಾರು ಇದ್ದ ಕಾರಣ ತಕರಾರು ಬಗೆಹರಿದ ಮೇಲೆ ಕ್ರಯ

ಪತ್ರ ಮಾಡಿಕೊಡುತ್ತೇವೆ ಎಂದು ನಿಪಿ 1 ರಲ್ಲಿ ನಮೂದು ಮಾಡಲಾಗಿದೆ. ನಿಪಿ 1ಕ್ಕೆ ಸಾಕ್ಷಿಗಳಾಗಿ ರಾಮಕೃಷ್ಣ ರೆಡ್ಡಿ ಹಾಗೂ ವೆಂಕಟಸ್ವಾಮಿ ಎಂಬುವವರು ಸಹಿ ಮಾಡಿರುತ್ತಾರೆ. ಅವರು ನಮ್ಮ ಊರಿನವರು ಆಗಿರುತ್ತಾರೆ. ಅವರು ನನಗೆ ತಿಳಿದಿರುವ ವ್ಯಕ್ತಿಗಳು. ಅವರು ಮತ್ತು ಪ್ರತಿವಾದಿಗಳು ಬೇರೆ ಬೇರೆ ಊರಿನವರು ಎಂದರೆ ಸರಿ. ನಿಪಿ 1 ಕ್ಕೆ ಸಾಕ್ಷಿಗಳು 08.12.2011 ರಂದು ಸಹಿ ಮಾಡಿರುತ್ತಾರೆ. ನಿಪಿ 1 ರಲ್ಲಿ 07.12.2011 ಎಂದು ಇದೆ ಎಂದರೆ ಸರಿ. ಸಾಕ್ಷಿಗಳು ಚಂದಾಪುರ ವಕೀಲರ ಆಫೀಸಿನಲ್ಲಿ ಸಹಿ ಮಾಡಿರುತ್ತಾರೆ. ನಿಪಿ 1 ಅನ್ನು ನನ್ನ ತಂದೆ ವಕೀಲರ ಕಛೇರಿಯಲ್ಲಿ ತಯಾರು ಮಾಡಿಸಿರುತ್ತಾರೆ. ಅದನ್ನು ವಕೀಲರೆ ತಯಾರು ಮಾಡಿರುತ್ತಾರೆ. ಆ ಸಮಯದಲ್ಲಿ ಪ್ರತಿವಾದಿಗಳು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ಆಗುವ ಕಾಲಕ್ಕೆ ನಾನು ಹಾಜರು ಇರಲಿಲ್ಲ ಎಂದರೆ ಸರಿ. ನಿಪಿ 1 ರಲ್ಲಿರುವ ಮುನಿಯಮ್ಮ ಎಂಬುವವರ ಸಹಿ ಮನಿಯಮ್ಮ ನವರದ್ದೋ ಅಥವಾ ಬೇರೆಯವರದ್ದ ಎಂದು ತಿಳಿದುಕೊಂಡಿದ್ದೀರ ಎಂದರೆ ಇಲ್ಲ.

ನಮ್ಮ ತಂದೆ ಬದುಕಿದ್ದ ಸಮಯದಲ್ಲಿ ಪ್ರತಿವಾದಿಗಳಿಗೆ ನೋಟಿಸ್ ಕೊಟ್ಟಿಲ್ಲ. ನಿಪಿ 4 ನಾವೇ ವಕೀಲರ ಮೂಲಕ ನೋಟಿಸ್ ಕೊಡಿಸಿದ್ದೇವೆ ಎಂದರೆ ಸರಿ. ನಿಪಿ 4 ರಲ್ಲಿ ದಾವಾ ಆಸ್ತಿ ದಾರಿಗಾಗಿ ಮಾರಾಟ ಮಾಡಿದ್ದಾರೆ ಎಂದು ಬರೆಸಿದ್ದೇನೆ. ದಾವಾ ಆಸ್ತಿ ದಾರಿಗಾಗಿ ಹೊರತು ಪಡಿಸಿ ಬೇರೆ ಉದ್ದೇಶಕ್ಕೆ ಅವಶ್ಯಕತೆ ಇಲ್ಲ. ದಾವಾ ಆಸ್ತಿಯನ್ನು ದಾರಿಗಾಗಿ ನಾವು ಖರೀದಿ ಮಾಡಿದ್ದೇ ಆದಲ್ಲಿ ಆ ಬಗ್ಗೆ ಅದರಲ್ಲಿ ಬರೆಯುತ್ತಿದ್ದೆವು ಎಂದರೆ ಬರೆಸಿರುತ್ತೇವೆ ಎಂದು ನುಡಿದಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು).

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿ ದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**